Reg. No. | | | | | | | | | | | |

S.D.M.C. OF BUSINESS MANAGEMENT LIBRARY

**BCAKALN 102**

## I Semester B.C.A. Examination, Dec. 2023/Jan. 2024
## (NEP 2020) (2022 – 23 Batch Onwards)
## KANNADA LANGUAGE
## ಗಣಕಮಂಗಳ – ೧ (AECC)

Time : 2 Hours Max. Marks : 60

I. ಮೂರು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ. **(3×8=24)**

1) ಕನ್ನಡ ನಾಡು-ನುಡಿಯ ಹಿರಿಮೆಯನ್ನು ''ಕನ್ನಡಿಗರ ತಾಯಿ'' ಕವನದ ಹಿನ್ನೆಲೆಯಲ್ಲಿ ವಿವರಿಸಿ.

**ಅಥವಾ**

''ರುರು ಪ್ರಮದಾಪ್ರೀತಿ'' ಕವನದ ಆಶಯವನ್ನು ಬರೆಯಿರಿ.

2) ''ತಾಯಿ ಕೊಟ್ಟ ವರ'' ಲೇಖನದ ಆಶಯವನ್ನು ಬರೆಯಿರಿ.

**ಅಥವಾ**

''ಒಂದು ಮಾಣಿಯ ಪರಿಣಯ ಪ್ರಸಂಗ'' ಕತೆಯ ವಿವರಗಳನ್ನು ಕುರಿತು ಬರೆಯಿರಿ.

3) ಅನ್ಯಾಯ ಅಸಮಾನತೆಗಳು ನಿರಂತರವಾಗಿವೆ ಎಂಬ ಕಹಿಸತ್ಯ 'ಅಮಾಸ' ಕತೆಯಲ್ಲಿ ಪ್ರಕಟಗೊಂಡ ಬಗೆ ಹೇಗೆ ? ವಿವರಿಸಿ.

**ಅಥವಾ**

ನವ ಮಾಧ್ಯಮಗಳು ಯಾವುವು ? ಅವುಗಳ ಸಾಧಕ-ಬಾಧಕಗಳನ್ನು ಕುರಿತು ಬರೆಯಿರಿ.

II. ಮೂರು ಪ್ರಶ್ನೆಗಳಿಗೆ ಉತ್ತರಿಸಿ. **(3×5=15)**

1) ಜಿ.ಪಿ. ರಾಜರತ್ನಂರವರ ಕನ್ನಡಾಭಿಮಾನವನ್ನು ಕುರಿತು ಬರೆಯಿರಿ.

**ಅಥವಾ**

''ಖಗ್ರಾಸ ಗ್ರಹಣೋಪಾಖ್ಯಾನ'' ಕವನದ ಆಶಯವನ್ನು ಬರೆಯಿರಿ.

2) ''ಮುಗಿಲುಗಳು'' ಪ್ರಬಂಧವು ಭಾವನಾತ್ಮಕ ನೆಲೆಯ ಚಿಂತನೆಗಳನ್ನು ಒಳಗೊಂಡಿದೆ ಎಂಬುದನ್ನು ವಿಶ್ಲೇಷಿಸಿರಿ.

**ಅಥವಾ**

''ಹದಿಹರೆಯದವರನ್ನು ಕುರಿತು'' ಲೇಖನದ ಆಶಯವನ್ನು ಬರೆಯಿರಿ.

3) ಪ್ರಮುಖ ಸಾಮಾಜಿಕ ಜಾಲತಾಣಗಳನ್ನು ಪರಿಚಯಿಸಿರಿ.

**ಅಥವಾ**

ಬಾಹ್ಯಾಕಾಶದಲ್ಲಿ ಅಂತರ್ಜಾಲ ಸಂಪರ್ಕ ಒದಗಿಸುವುದು ಹೇಗೆ ? ತಿಳಿಸಿರಿ.

III. ಈ ಕೆಳಗಿನವುಗಳಲ್ಲಿ **ಒಂದು** ಪದ್ಯದ ಸಂದರ್ಭ ಮತ್ತು ಭಾವಾರ್ಥ ಸ್ವಾರಸ್ಯವನ್ನು ಬರೆಯಿರಿ. **(1×5=5)**

1) ಕುಗ್ಗದಂತೆ ಹಿಗ್ಗಿಪಂತೆ ನಿನ್ನಹೆಸರ ಟೆಕ್ಕೆಯಂ,
ನೀಗದಂತೆ ಸಾಗಿಪಂತೆ ನಿನ್ನ ನುಡಿಯ ಢಕ್ಕೆಯಂ,
ನಮ್ಮೆದೆಯಂ ತಾಯೆ ಬಲಿಸು,
ಎಲ್ಲರ ಬಾಯಲ್ಲಿ ನೆಲೆಸು,
ನಮ್ಮ ಮನಮನೊಂದೆ ಕಲಸು !
ಇದನೊಂದನೆ ಕೋರುವೆ....
ನಿನ್ನ ಮೂರ್ತಿ ಜಗತ್ಕೀರ್ತಿ ಎಂದಿಗೆಮಗೆ ತೋರುವೆ ?

2) ಬಿತ್ತರದಾಗಸ ಹಿನ್ನೆಲೆಯಾಗಿರೆ
ಪರ್ವತದೆತ್ತರ ಸಾಲಾಗೆಸೆದಿರೆ
ಕಿಕ್ಕಿರಿದಡವಿಗಳಂಚಿನ ನಡುವೆ
ಮೆರೆದಿರೆ ಜಲ ಸುಂದರಿ ತುಂಗೆ
ದೇವರು ರುಜು ಮಾಡಿದನು
ರಸವಶನಾಗುತ ಕವಿ ಅದ ನೋಡಿದನು.

S.D.C. OF BUSINESS MANAGEMENT LIBRARY



IV. **ಎರಡು** ವಾಕ್ಯಗಳ ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ. **(2×4=8)**

1) ಇಲ್ಲಿಲ್ಲದ ಶಿಲ್ಪಮಿಲ್ಲ ; ನಿನ್ನ ಕಲ್ಲೆ ನುಡಿವುದೆಲ್ಲ

2) ಕನ್ನಡ್ ಸುದ್ದೀಗ್ ಏನ್ರ ಬಂದ್ರೆ ಮಾನಾ ಉಳಿಸಾಕಿಲ್ಲ

3) ಕವಿಮನ ನಾಕದಿ ನೆಲೆಸಿತ್ತು

4) ಮಾತು ಮಾತಿಗೇಕೋ ನಗು, ಮರು ಘಳಿಗೆಯೇ ಮೌನ.

V. ಎಲ್ಲಾ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿ. **(8×1=8)**

1) ''ರಾಷ್ಟ್ರಕವಿ ಪ್ರಶಸ್ತಿ'' ಪಡೆದ ಮೊದಲ ಕನ್ನಡ ಕವಿ ಯಾರು ?

2) ಜಿ. ಪಿ. ರಾಜರತ್ನಂ ಯಾವ ವಂಶದವರು ?

3) ದೇವರು ಯಾವ ರೂಪದಲ್ಲಿ ರುಜು ಮಾಡಿದನೆಂಬುದನ್ನು ಕುವೆಂಪು ಹೇಳಿದ್ದಾರೆ ?

4) ''ತಾಯ್ತಿ ಕೊಟ್ಟ ವರ'' ಪ್ರಬಂಧವನ್ನು ಯಾವ ಕೃತಿಯಿಂದ ಆರಿಸಲಾಗಿದೆ ?

5) ಜಿ. ಟಿ. ನಾರಾಯಣರಾವ್‌ರವರ ಆತ್ಮಕಥೆ ಯಾವುದು ?

6) ಎಂ. ವಿ. ಸೀತಾರಾಮಯ್ಯನವರ ಕಾವ್ಯನಾಮ ಯಾವುದು ?

7) ದೇವನೂರು ಮಹಾದೇವರವರ ಮೊದಲ ಕಥಾಸಂಕಲನ ಯಾವುದು ?

8) ಭಾರತೀಯ ಭಾಷೆಗಳಲ್ಲಿ ''ಕಂಪ್ಯೂಟಿಂಗ್ ಪಿತಾಮಹ'' ಯಾರು ?

---